**ದಿನಾಂಕಃ 05.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನಗೆ ಈಗ 37 ವರ್ಷ ವಯಸ್ಸು ಆಗಿತ್ತು. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಕೆಲಸ ಮತ್ತು ಆದಾಯದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

1ನೇ ಎದುರುದಾರರು ಆಪಾದಿತ ವಾಹನದ ಮಾಲೀಕರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 3ನೇ ಎದುರುದಾರರಿಗೂ, ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 3ನೇ ಎದುರುದಾರರನ್ನು ಅನಾವಶ್ಯಕವಾಗಿ ಪಕ್ಷಕಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 3ನೇ ಎದುರುದಾರರಿಗೆ ಆಪಾದಿತ ವಾಹನಕ್ಕೆ ಸಂಬಂಧಿಸಿದಂತೆ ಯಾವುದೇ ಸಂಬಂಧ ಇಲ್ಲದ ಕಾರಣ ಅವರು ಪರಿಹಾರ ನೀಡಲು ಬಾಧ್ಯಸ್ದರಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶಾಮೀಲಾಗಿ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಮಾಲೀಕರು ಪರಿಹಾರ ನೀಡಲು ಬಾಧ್ಯಸ್ಥರು ಎಂದರೆ ಸಾಕ್ಷಿಯು ಎದುರುದಾರರು ಬಾಧ್ಯಸ್ಥರು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಆ ದಿನ ನಾವು ಆಲೂರು ಗುಡ್ಡದ ಹಳ್ಳಿಯಿಂದ ದೊಡ್ಡಬಳ್ಳಾಪುರಕ್ಕೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿರುತ್ತದೆ. ದ್ವಿಚಕ್ರ ವಾಹನವನ್ನು ಆ ದಿನ ನನ್ನ ಗಂಡ ಚಾಲನೆ ಮಾಡುತ್ತಿದ್ದರು. ಆಪಾದಿತ ವಾಹನ ನಮ್ಮ ಎದುರಿನಿಂದ ಬರುತ್ತಿತ್ತು. ಅಪಘಾತವಾದ ರಸ್ತೆ ದ್ವಿಮುಖ ಸಂಚಾರ ಇರುವ ವ್ಯವಸ್ಥ ಇರುವ ರಸ್ತೆ ಆಗಿದ್ದು, ಎರಡು ಬಸ್ಸುಗಳು ಒಟ್ಟಿಗೆ ಹೋಗುವಷ್ಟು ಅಗಲ ಇದೆ. ಆಪಾದಿತ ವಾಹನದ ಮುಂಭಾಗ ಇತರ ಯಾವುದೇ ವಾಹನಗಳು ಬರುತ್ತಿರಲಿಲ್ಲ. ನಮ್ಮ ದ್ವಿಚಕ್ರ ವಾಹನದ

ಮುಂಭಾಗದಲ್ಲಿ ಸುಮಾರು ವಾಹನಗಳು ಹೋಗುತ್ತಿದ್ದವು. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳುವ ರೀತಿಯಲ್ಲಿ ಅಪಘಾತ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮುಂದೆ ಹೋಗುತ್ತಿದ್ದ ವಾಹನವನ್ನು ಹಿಂದಿಕ್ಕುವಾಗ ಅವರ ಅಜಾರೂಕತೆಯಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನನ್ನ ಚಿಕಿತ್ಸೆ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ನಾನು ದ್ವಿತಿಯ ಪಿಯುಸಿ ವರೆಗೆ ವ್ಯಾಸಂಗ ಮಾಡಿದ್ದರು. ನನ್ನ ಕೆಲಸ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಪೊಲೀಸ್ ದಾಖಲಾತಿಗಳ ಪ್ರಕಾರ ಆಪಾದಿತ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆಪಾದಿತ ವಾಹನಕ್ಕೆ ವಿಮೆ ಇರಲಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆಪಾದಿತ ವಾಹನದ ವಿಮೆ ಇರುವ ಬಗ್ಗೆ ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. ವಿಮೆ ಇಲ್ಲದ ವಿಚಾರ ನನಗೆ ಗೊತ್ತಿದ್ದರೂ ಸಹ ಅನಾವಶ್ಯಕವಾಗಿ 2ನೇ ಎದುರುದಾರರನ್ನು ಪಕ್ಷಕಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**